ಹೇಗಾದರೂ ಅವನಿಗೆ ಸುದ್ದಿ ತಲುಪಿರುತ್ತದೆ, ಈ ಸಂದರ್ಭದಲ್ಲಾದರೂ ಬಂದೇ ಬರುತ್ತಾನೆ ಎನ್ನುವ ನಂಬಿಕೆ. ಬರುವವರೆಲ್ಲಾ ಬಂದರು, ಇನ್ನು ಸುಮ್ಮನೆ ನಾಳೆಯವರೆಗೆ ಹೆಣ ಇರಿಸಿಕೊಳ್ಳುವುದೇತಕ್ಕೆ? ರಾತ್ರಿಯೇ ಅಂತಿಮ ಕಾರ್ಯ ಮುಗಿಸುವುದು ಎಂದು ಅಣ್ಣತಮ್ಮಂದಿರು ತಮ್ಮತಮ್ಮಲ್ಲೇ ಮಾತಾಡಿಕೊಂಡು ಪುರೋಹಿತರಿಗೆ ಬರ ಹೇಳಿ, ಬೇಕಾದ ಸಿದ್ಧತೆ ಮಾಡಿಕೊಳ್ಳಲಾರಂಭಿಸಿದರು. ಮೌನವಾಗಿ ಕಲ್ಲಾಗಿದ್ದ ಸೀತಾಲಕ್ಷ್ಮಿಯ ಅಭಿಪ್ರಾಯ ಕೇಳುವವರಾರೂ ಇರಲಿಲ್ಲ. ಇದ್ದಾಗ ಕಷ್ಟಕ್ಕೆ ಆಗದೆ ಮದುವೆಗೆ ಮುಂಜಿಗೆ ಕರೆಯದೆ ದೂರ ಇಟ್ಟ ಮಂದಿ ಸತ್ತಾಗ ಬಂದು ಸಂತಾಪ ಸೂಚಿಸುತ್ತಿರುವ ದೊಡ್ಡ ಪ್ರಹಸನಕ್ಕೆ ಸಾಕ್ಷಿಯಾಗಿ ಮೂಲೆಯಲ್ಲಿ ಕುಳಿತಿದ್ದಳು ಸೀತಾಲಕ್ಷ್ಮಿ. ಚಟ್ಟ ತಯಾರಾಗಿ ಇನ್ನೇನು ಸ್ಮಶಾನಕ್ಕೆ ಸಾಗಿಸಬೇಕು ಎನ್ನುವಷ್ಟರಲ್ಲಿ ವಿಶ್ವನಾಥ ಬಸ್ಸಿಳಿದು ಲಗುಬಗೆಯಲ್ಲಿ ಹೆಗಲು ಕೊಡಲು ಬಂದ! ಅಣ್ಣಂದಿರು 'ಬೇಡ, ಅವಶ್ಯಕತೆಯಿಲ್ಲ, ನಾವೆಲ್ಲಾ ನೋಡಿಕೊಳ್ತೇವೆ' ಎಂದು ಬಿರುಸಾಗಿ ಹೇಳಿ ತಡೆದರು. ವಿಶ್ವನಾಥ ಹಿಂದೆ ಸರಿದ. ತನ್ನ ನಂಬಿಕೆ ಸುಳ್ಳಾಗಿಸದೆ ಕೊನೆಯ ಕ್ಷಣಗಳಲ್ಲಾದರೂ ಬಂದು ಸೇರಿಕೊಂಡ ವಿಶ್ವನಾಥನನ್ನು ಕಂಡ ಸೀತಾಲಕ್ಷ್ಮಿಯ ಕಣ್ಣಲ್ಲಿ ಎರಡು ಹನಿ ನೀರು!.

ಸ್ಮಶಾನದಲ್ಲೂ ಅಣ್ಣಂದಿರು ವಿಶ್ವನಾಥನನ್ನು ಹತ್ತಿರಕ್ಕೂ ಬಿಟ್ಟುಕೊಳ್ಳದೆ ಎಲ್ಲಾ ವಿಧಿವಿಧಾನಗಳನ್ನೂ ತಾವೇ ಮಾಡಿದರು. ಭಟ್ಟರ ದೇಹ ಬೆಂಕಿಯಲ್ಲಿ ದಹಿಸುತ್ತಿರುವಾಗ ವಿಶ್ವನಾಥ ದೂರದಲ್ಲಿ ನಿಂತಿದ್ದ. ಮಗ ಬಂದಿದ್ದಕ್ಕೆ ಸಮಾಧಾನ ಪಟ್ಟುಕೊಳ್ಳುವುದೋ, ಇಂಥಾ ಕ್ಷಣಗಳಲ್ಲೂ ಅವನನ್ನು ದೂರ ಇಟ್ಟ ಮನುಷ್ಯನೊಳಗಿನ ಅಮಾನುಷತೆಗೆ ತಲೆತಗ್ಗಿಸುವುದೋ? ಬೆಂಕಿಯ ಬೆಳಕಲ್ಲಿ ಕಾಣುತ್ತಿದ್ದ ಸೀತಾಲಕ್ಷ್ಮಿಯ ಮುಖದಲ್ಲಿ ಇದ್ದ ಭಾವವಾದರೂ ಯಾವುದು? ಯಾರಿಗೂ ಅವಳೊಳಗಿನ ಸಂಕಟಕ್ಕೆ ದನಿಯಾಗುವುದು ಬೇಕಿರಲಿಲ್ಲ. ಕೆಳಜಾತಿಯ ಹುಡುಗಿಯನ್ನು ಮದುವೆಯಾಗಿ ಮನೆಬಿಟ್ಟು ಹೋಗಿದ್ದ ವಿಶ್ವನಾಥನನ್ನು ತಂದೆಯ ಅಂತಿಮ ಕಾರ್ಯದಲ್ಲೂ ಅಣ್ಣಂದಿರು ಸೇರಿಸಿಕೊಳ್ಳಲಿಲ್ಲ ಎನ್ನುವುದು ಇನ್ನೊಂದಷ್ಟು ದಿನ ಜನರ ಬಾಯಲ್ಲಿ ಜಗಿಯುವ ವಿಷಯವಾಯಿತು. ಬಸ್ ಸ್ಟ್ಯಾಂಡಿನ ಕಟ್ಟೆಯ ಮೇಲೆ ರಾತ್ರಿ ಕಳೆದ ವಿಶ್ವನಾಥ ಬೆಳಗಿನ ಜಾವದ ಬಸ್ಸು ಹತ್ತಿ ಜಾಗ ಖಾಲಿ ಮಾಡಿದ. ಭಟ್ಟರ ಹಿರಿಯ ಮಕ್ಕಳು ಎಲ್ಲಿ ಹನ್ನೊಂದು, ಹನ್ನೆರಡರ ಕಾರ್ಯವನ್ನು ಮಾಡುವುದು? ಹೇಗೆ ಮಾಡುವುದು ಎಂದು ನಿಗದಿಪಡಿಸಿ ತಮ್ಮ ತಮ್ಮ ಮನೆಗಳಿಗೆ ಹೋದರು. ಅವತ್ತಿನಿಂದ ಶುರುವಾದ ಸೀತಾಲಕ್ಷ್ಮಿಯ ಒಂಟಿಪಯಣ ಆರೇಳು ವರ್ಷಗಳಿಂದ ಯಾವುದೇ ಗಮನಾರ್ಹ ಬದಲಾವಣೆಗಳಿಲ್ಲದೇ ಒಂದೇ ರೀತಿ ಸಾಗುತ್ತಿತ್ತು.

ಈ ನಡುವೆ ಆ ಊರಿನಲ್ಲಿ ಹತ್ತಿರದ ಊರುಗಳಲ್ಲಿ ಇನ್ನೊಂದೆರಡು ಜಾತಿ ಬಿಟ್ಟ ಮದುವೆ ಪ್ರಕರಣಗಳು ನಡೆದು ಜನರು ಸ್ವಲ್ಪ ತಣ್ಣಗಾಗಿದ್ದರು. ಪ್ರತಿಕ್ರಿಯೆಗಳು ಮೊದಲಿನಷ್ಟು ತೀವ್ರವಾಗಿರುತ್ತಿರಲಿಲ್ಲ. ಯೂನಿವರ್ಸಿಟಿಯ ಹಾಸ್ಟೆಲ್‌ನಲ್ಲಿದ್ದುಕೊಂಡು ಎಂ.ಎ ಮಾಡುತ್ತಿದ್ದ ಸಂಕದಮನೆ ಶ್ಯಾಂ ಭಟ್ಟರ

